334355

SCAKN201

## II Semester B.C.A./B.C.A. (D.S) Degree Examination, June/July - 2025

*(SEP Scheme Freshers)*

### ಕನ್ನಡ ಭಾಷೆ ಪತ್ಯ

### ಕನ್ನಡ ಧಾರೆ – 2

### ಪತ್ರಿಕೆ : 2

**Time : 3 Hours** **Maximum Marks : 80**

**I.** ಅ) **ಪದ್ಯದ ಭಾವಾರ್ಥ ಬರೆಯಿರಿ.** **(1×6=6)**

ಒಳಗೊಳಗೆ ಬೇರುಕೊಯ್ದು
ಲೋಕದೆದುರಲಿ ನೀರು ಹೊಯ್ದು
ನನ್ನ ಸಲಹುವ ನಿಮ್ಮ ಕಪಟ ಗೊತ್ತಿದ್ದರೂ
ಗೊತ್ತಿಲ್ಲದಂತೆ ನಟಿಸಿ
ಚಕಾರವೆತ್ತದೆ ನಿಮ್ಮೊಡನೆ ಕಾಫಿಹೀರಿ ಪೇಪರೋದಿ ಹರಟಿ
ಬಾಳ ತಳ್ಳುವುದಿದೆ ನೋಡಿ
ಅದು ಬಲು ಕಷ್ಟದ ಕೆಲಸ

ಆ) **ಎರಡಕ್ಕೆ ಟಿಪ್ಪಣಿ ಬರೆಯಿರಿ.** **(2×2=4)**

1) ಅಂಬಿಕಾತನಯ ದತ್ತ
2) ಗೋಪಾಲಕೃಷ್ಣ ಅಡಿಗ
3) ಚ. ಸರ್ವ ಮಂಗಳ
4) ಆಕಾಶದ ಅಗಲಕ್ಕೂ ನಿಂತ ಆಲವೇ !

**II.** **ಆರು ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿರಿ.** **(6×5=30)**

1) ಸಾಮಾಜಿಕ ಅನಿಷ್ಟ ಪದ್ಧತಿಗೆ ಬಲಿಯಾದ ಪುಟ್ಟವಿಧವೆಯ ಬದುಕು.
2) ನಿರೂಪಕರು ಕ್ಷೇಮಕಾರಿಯನ್ನು ಭೇಟಿಯಾಗುತ್ತಿದ್ದ ಸಂದರ್ಭ.

3) 'ಮಂತ್ರ ಮಾಂಗಲ್ಯ' ವಿವಾಹದ ವಿಧಿ ನಿಷೇಧಗಳು

4) 'ಸಂಜೆದಾರಿ' ಕವನದ ತಾತ್ವಿಕತೆ

5) ಡಾ. ಸಿದ್ಧಲಿಂಗಯ್ಯನವರು ಅಂಬೇಡ್ಕರ್ ವ್ಯಕ್ತಿತ್ವವನ್ನು ಕಟ್ಟಿಕೊಡುವ ರೀತಿ.

6) 'ಭಂಡರು' ಕವನದಲ್ಲಿ ಮೂಡಿಬಂದಿರುವ ಸ್ತ್ರೀ ಸಂವೇದನೆಯ ಸ್ವರೂಪ.

7) ರಾಚವ್ವಳ ವೈಧವ್ಯದ ಬದುಕು ಮತ್ತು ಪರಿಣಾಮ

8) ಭೂಭಾರ ನಿರ್ವಹಣೆಯ ಸವಾಲು

**III. ಎರಡು ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ. (2×10=20)**

1) ಆಧುನಿಕ ಕಾಲದಲ್ಲಿ 'ಮಂತ್ರಮಾಂಗಲ್ಯ'ದ ಮಹತ್ವವನ್ನು ಕುರಿತು ಬರೆಯಿರಿ.

2) ತೇಜಸ್ವಿಯವರು ಆನರ್ಸಿನಲ್ಲಿ ಫೇಲಾದ ಪ್ರಸಂಗ ಮತ್ತು ಅದರ – ಪರಿಣಾಮವನ್ನು ಕುರಿತು ಬರೆಯಿರಿ.

3) "ರಾಚವ್ವಳ ಸಂಗೀತ ಸಾಧನೆಯ ಹಿಂದಿನ ಬದುಕು ಹೂಹಾಸಿಗೆಯಾಗಿರಲಿಲ್ಲ" ಎಂಬ ಮಾತನ್ನು ಸ್ಪಷ್ಟಪಡಿಸಿ.

**IV. ಅ) ಎರಡು ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ. (2×5=10)**

1) ಪಾರುವಿನ ಪಾತ್ರ ಪರಿಚಯ

2) ಅಮೀನಮ್ಮ ನಾದಿರಾಳಿಂದ ಮಗುವನ್ನು ಕರೆದುಕೊಂಡು ಹೋಗಲು ಕಾರಣ.

3) ಮಹಮ್ಮದ್ ಖಾನ್ ತನ್ನ ಮಗಳು ನಾದೀರಾಗೆ ತಲಾಖ್ ನೀಡಲು ರಶೀದ್‌ಗೆ ಒತ್ತಾಯಿಸಿದ ಪ್ರಸಂಗ.

**ಆ) ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿ. (1×10=10)**

1) ತಲಾಖ್ ಎಂದರೇನು? ಕಾದಂಬರಿಯ ಹಿನ್ನೆಲೆಯಲ್ಲಿ ವಿವರಿಸಿ.

2) ಮಹಮ್ಮದ್ ಖಾನ್, ಜಮೀಲ, ಮೌಲ್ವಿ – ಯಾವುದಾದರೂ ಎರಡು ಪಾತ್ರಗಳನ್ನು ಪರಿಚಯಿಸಿ.